

# ಕವಿತೆ



ಜಯಂತ ಕಾಯ್ಕಿಣಿ

ಕಲೆ: ಎಸ್‌ವಿ. ಹೂಗಾರ್

## ಅಶರೀರವಾಣಿ

ಕಿಟಕಿಯ ಆಚೆ ಯಾರು ಈಚೆ ಯಾರು
ನಡುವೆ ಬೀದಿ ನಾಟಕದವರು ಬಿಟ್ಟು ಹೋದ
ಕೇದಗೆಯ ಕಾಡು
ಅವರ ಉಡಿಯಲ್ಲಿತ್ತು ಕೇದಗೆಯ ಹುಡಿ
ನೆಟ್ಟ ನಜರಿನಲ್ಲಿತ್ತು ಬಾಡಿಗೆಯ ಕಿಡಿ
ಬೇಲಿಯ ಮೇಲೆ ಹರವಿ ಒಣ ಹಾಕಿ ವೇಷಭೂಷಗಳ
ಒಳಗೆ ಯಾರು ಹೊರಗೆ ಯಾರು

ಒಬ್ಬರ ಮನೆಯಿಂದ ಕ್ಯಾಲೆಂಡರು ಇನ್ನೊಬ್ಬರ
ಮನೆಯಿಂದ ದಿನಗಳು ಮತ್ತೊಬ್ಬರ ಗೂಡಿಂದ
ಮಡಿಸುವ ಖುರ್ಚಿ ಮಗುದೊಬ್ಬರ ತಾರಸಿಯಿಂದ ಅಟ್ಟಹಾಸ
ಕಡ ತಂದು ಕೂಡಿ ಹಾಕಿರುವ
ತುರ್ತು ರಿಯಾಲಿಟಿ ಶೋ ಇದು

ಪಾತ್ರ ಪರಿಚಯ ಇಲ್ಲದೆಯೇ ಸೀದಾ
ಹೊಸ್ತಿಲು ದಾಟಿ ಹೊಸ್ತಿಲು ದಾಟಿ ಹೊಸ್ತಿಲು ದಾಟಿ
ಅಪರಿಚಿತ ಅಡಿಗೆಯೊಳದಲ್ಲಿ ಕೂತಾಯಿತು